MAY 17, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **‘ಆಪರೇ  ’ನ್ ಸಿಂಧೂರ್’; ರಾಜ್ಯದ ವಿವಿಧೆಡೆ, ಭಾರತೀಯ ಸೈನ್ಯವನ್ನು ಅಭಿನಂದಿಸಿ, ‘ತಿರಂಗಾ ಯಾತ್ರೆ’,**
- **ಕೊಪ್ಪಳದ ನವಲಿಯಲ್ಲಿ, ತುಂಗಭದ್ರಾ ಸಮಾನಾಂತರ ಜಲಾಶಯ; ಆಂಧ್ರ ಹಾಗೂ ತೆಲಂಗಾಣಕ್ಕೆ, ರಾಜ್ಯದ ಪ್ರಸ್ತಾವ.**
- **ರಾಷ್ಟ್ರೀಯ ಡೆಂಘಿ ದಿನ; ನೈರ್ಮಲ್ಯ ಕಾಪಾಡಲು, ಜನಜಾಗ್ರತಿ.**
- **ಪರಿಶಿಷ್ಟ ಜಾತಿ ಒಳ ಮೀಸಲಾತಿ ಸಮೀಕ್ಷೆ; ಈ ತಿಂಗಳ 25ರ ವರೆಗೆ, ವಿಸ್ತರಣೆ.**

<><><>

**ಈಗ ವಾರ್ತೆಗಳ ವಿವರ**

<><><>

**ಪಾಕಿಸ್ಥಾನ ಆಕ್ರಮಿತ ಕಾಶ್ಮೀರದಲ್ಲಿದ್ದ, ಭಯೋತ್ಪಾದಕರ ಅಡಗುತಾಣಗಳ ಮೇಲೆ, ಭಾರತೀಯ ಸೇನೆಯ ನಿರ್ಣಾಯಕ ಕಾರ್ಯಾಚರಣೆ, ‘ಆಪರೇ  ’ನ್ ಸಿಂಧೂರ್’ಗಾಗಿ ಅಭಿನಂದಿಸಲು, ಜನ ಸಹಭಾಗಿತ್ವದಲ್ಲಿ, ಮೈಸೂರು, ಚಿಕ್ಕಮಗಳೂರು ಹಾಗೂ ಹುಬ್ಬಳ್ಳಿಯಲ್ಲಿ ‘ತಿರಂಗಾ ಯಾತ್ರೆ’ ನಡೆಯಿತು.**

<><><>

**‘ಆಪರೇ  ’ನ್ ಸಿಂಧೂರ; ಭಾರತದ ಸೇನೆಯೊಂದಿಗೆ, ರಾಷ್ಟ್ರದ ರಕ್ಷಣೆಗಾಗಿ ನಾಗರಿಕರು’ ಧ್ಯೇಯದೊಂದಿಗೆ, ಈ ಯಾತ್ರೆ ಗಮನ ಸೆಳೆದಿದೆ ಎಂದು, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಹುಬ್ಬಳ್ಳಿಯ ತಿರಂಗಾ ಯಾತ್ರೆಯಲ್ಲಿ, ನುಡಿದರು.**

<><><>

**ಮುಖ್ಯಮಂತ್ರಿ ಸಿದ್ದರಾಮಯ್ಯ, ಕೊಪ್ಪಳದಲ್ಲಿ ಮಾತನಾಡಿ, ಭಾರತೀಯ ಸೈನ್ಯದ ಕಾರ್ಯಾಚರಣೆ, ಅಭಿಮಾನ ಪಡುವಂಥದ್ದು. ದೇಶದ ನಾಗರಿಕರು ಹೆಮ್ಮೆ ವ್ಯಕ್ತ ಪಡಿಸಿದ್ದಾರೆ. ಅನಿವಾರ್ಯವಾದಲ್ಲಿ, ಅಂತಿಮ ಹೆಜ್ಜೆಯಾಗಿ, ಯುದ್ಧವನ್ನು ಆಯ್ದುಕೊಳ್ಳಬೇಕು ಎಂದು, ತಾವು ಅಭಿಪ್ರಾಯ ವ್ಯಕ್ತ ಪಡಿಸಿದ್ದಾಗಿ, ಸ್ಪಷ್ಟ ಪಡಿಸಿದರು.**

<><><>

ಆಪರೇ ’ನ್ ಸಿಂಧೂರ ಕುರಿತು, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ, ಕನ್ನಡ ಪತ್ರಿಕೋದ್ಯಮದ ಹಿರಿಯ ನಿಯತಕಾಲಿಕೆ, ಧಾರವಾಡದ ಜೀವನ ಶಿಕ್ಷಣ ಮಾಸಪತ್ರಿಕೆಯ ವಿಶ್ರಾಂತ ಸಂಪಾದಕ, ಗುರುಮೂರ್ತಿ ಯರಗಂಬಳಿಮಠ.

<><><>

ಗುರುಮೂರ್ತಿ ಯರಗಂಬಳಿಮಠ ಧ್ವನಿ 48 ಸೆಕೆಂದುಗಳು

<><><>

ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲೂಕು, ಬಾಬುರಾಯನ ಕೊಪ್ಪಲಿನ, ಸೋಮಶೇಖರ್ ಮತ್ತು ಹರ್ಷಿತಾ ದಂಪತಿ, ತಮ್ಮ ಹೆಣ್ಣು ಮಗುವಿಗೆ, ಸಿಂಧೂರಿ ಎಂದು ನಾಮಕರಣ ಮಾಡಿ, ದೇಶ ಪ್ರೇಮ ಮೆರೆದಿದ್ದಾರೆ. ಮಂಡ್ಯ ರಕ್ಷಣಾ ವೇದಿಕೆ ಮಗುವಿನ ವಿದ್ಯಾಭ್ಯಾಸಕ್ಕೆ ಹತ್ತು ಸಾವಿರ ರೂಪಾಯಿ ಸಹಾಯ ಧನ ನೀಡಿ, ಅಭಿನಂದಿಸಿತು.

<><><>

ತುಂಗಭದ್ರಾ ಜಲಾಶಯದ ಹೂಳಿನ ಸಮಸ್ಯೆಗೆ, ಕೊಪ್ಪಳ ಜಿಲ್ಲೆ, ನವಲಿ ಬಳಿ ಸಮಾನಾಂತರ ಜಲಾಶಯ ನಿರ್ಮಾಣದ ಬಗ್ಗೆ ಪ್ರಸ್ತಾವವನ್ನು, ಆಂಧ್ರ ಪ್ರದೇಶ ಹಾಗೂ ತೆಲಂಗಾಣದ ಮುಖ್ಯಮಂತ್ರಿಗಳಿಗೆ ಸಲ್ಲಿಸಲಾಗಿದೆ ಎಂದು, ಜಲ ಸಂಪನ್ಮೂಲ ಖಾತೆ ಸಚಿವ ಡಿ.ಕೆ. ಶಿವಕುಮಾರ ತಿಳಿಸಿದ್ದಾರೆ. ಬಳ್ಳಾರಿಯ, ತೋರಣಗಲ್ಲಿನ ಜಿಂದಾಲ್ ವಿಮಾನ ನಿಲ್ದಾಣದಲ್ಲಿ, ಉಪ ಮುಖ್ಯಮಂತ್ರಿ ಮಾತನಾಡಿದರು. ಕಳಸಾ ಹಾಗೂ ಬಂಡೂರಾ ನಾಲಾ ನೀರಾವರಿ ಯೋಜನೆ ಅನುಷ್ಠಾನದ ಕುರಿತು, ಕೇಂದ್ರದ ಜಲ ಸಂಪನ್ಮೂಲ ಖಾತೆ ಸಚಿವರೊಂದಿಗೆ, ಚರ್ಚಿಸಿದ್ದಾಗಿ ಅವರು ಹೇಳಿದರು.

<><><>

2023, ಮೇ 13 ರಂದು, ರಾಜ್ಯ ಕಾಂಗ್ರೆಸ್ ಸರ್ಕಾರ, ಅಸ್ತಿತ್ವಕ್ಕೆ ಬಂದಿದೆ. 20 ರಂದು, ವಿಜಯನಗರ ಜಿಲ್ಲೆ, ಹೊಸಪೇಟೆಯಲ್ಲಿ ಎರಡು ವ ’ಗಳ ಸಂಭ್ರಮಾಚರಣೆ ಜರುಗಲಿದೆ, ಎಂದು, ಡಿ.ಕೆ. ಶಿವಕುಮಾರ ನುಡಿದರು.

<><><>

ಕೊಪ್ಪಳದಲ್ಲಿ ಮಾತನಾಡಿದ, ಮುಖ್ಯಮಂತ್ರಿ ಸಿದ್ದರಾಮಯ್ಯ, ಹೊಸಪೇಟೆಯ ಸಾಧನಾ ಸಮಾವೇಶದಲ್ಲಿ, ಒಂದು ಲಕ್ಷ ಫಲಾನುಭವಿಗಳಿಗೆ ಹಕ್ಕು ಪತ್ರ ನೀಡಲಾಗುವುದು ಎಂದರು.

<><><>

ಬಳಿಕ, ವಿಜಯನಗರ ಜಿಲ್ಲೆ ಹೊಸಪೇಟೆಯ, ಜಿಲ್ಲಾ ಕ್ರೀಡಾಂಗಣಕ್ಕೆ ತೆರಳಿ, ಸಮಾವೇಶದ ಪೂರ್ವ ಸಿದ್ಧತೆಗಳನ್ನು, ಮುಖ್ಯಮಂತ್ರಿ ಅವಲೋಕಿಸಿದರು.

<><><>

ಬೆಳಗಾವಿ ಜಿಲ್ಲೆ, ಭೀಮಗಢ ವನ್ಯಜೀವಿ ಧಾಮದ ತಳವಾಡೆ, ಗೌಳಿ ಗ್ರಾಮದಲ್ಲಿ ವಾಸಿಸುತ್ತಿರುವ, 27 ಕುಟುಂಬಗಳು, ಸ್ವಇಚ್ಛೆಯಿಂದ ಸ್ಥಳಾಂತರಗೊಳ್ಳಲು ಸಮ್ಮತಿಸಿದ್ದು, ಅರಣ್ಯ ಖಾತೆ ಸಚಿವ ಈಶ್ವರ ಖಂಡ್ರೆ ಇಂದು, ಪರಿಹಾರದ ಚೆಕ್ ಫಲಾನುಭವಿಗಳಿಗೆ ವಿತರಿಸಲಿದ್ದಾರೆ. ಮೊದಲ ಹಂತದಲ್ಲಿ ತಲಾ 10 ಲಕ್ಷ ರೂಪಾಯಿ, ಕಾಡಿನೊಳಗಿರುವ ಮನೆಗಳನ್ನು ತೊರೆದು ಸ್ಥಳಾಂತರಗೊಂಡ ಬಳಿಕ, ಅರಣ್ಯ ಅಧಿಕಾರಿಗಳು ಪರಿಶೀಲಿಸಿ, ಉಳಿದ 5 ಲಕ್ಷ ರೂಪಾಯಿ ಚೆಕ್ ವಿತರಿಸಲಿದ್ದಾರೆ.

<><><>

ವಿಶ್ವ ವಿಲುಪ್ತಿ ಅಂಚಿನ ಪ್ರಜಾತಿಗಳ ದಿನಾಚರಣೆಯನ್ನು, ಪ್ರತಿ ವರ್ಷ ಮೇ ತಿಂಗಳ 3ನೇ ಶುಕ್ರವಾರ, ಜಗತ್ತಿನಾದ್ಯಂತ ಆಚರಿಸಲಾಗುತ್ತದೆ. ಅವಸಾನದ ಅಂಚಿನಲ್ಲಿರುವ, ಪ್ರಾಣಿ, ಪಕ್ಷಿ ಹಾಗೂ ಸಸ್ಯ ಸಂಪತ್ತಿನ ಬಗ್ಗೆ ಜಾಗೃತಿ, ಅವುಗಳ

ಸಂರಕ್ಷಣೆಗೆ ಕೈಗೊಳ್ಳಬೇಕಾದ, ತುರ್ತು ಪೂರಕ ಕ್ರಮಗಳ ಬಗ್ಗೆ, ಚಿಂತನ–ಮಂಥನ ನಡೆಸುವ, ಉದ್ದೇಶ ಹೊಂದಲಾಗಿದೆ. ರಾಜ್ಯದ ದೊರವಾಯನ ಹಕ್ಕಿ, ಸಿಂಹ ಬಾಲದ ಸಿಂಗಳಿಕ, ಮಲಬಾರ್ ಸಿವೆಟ್ ಹಾಗೂ ಪ್ಯಾಂಗೋಲಿನ್‌ಗಳನ್ನು, ಅವನತಿಯ ಅಂಚಿನ ಪ್ರಜಾತಿಗಳು ಎಂದು, 1973ರ ವಿಲುಪ್ತಿ ಅಂಚಿನಲ್ಲಿರುವ ಪ್ರಜಾತಿಗಳ ಕಾಯ್ದೆ, ವರ್ಗೀಕರಿಸಿದೆ.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ x ಖಾತೆ @airnews_dharwad ಹಾಗೂ

ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.

<><><>

'ಕೂಡಲೇ ಕಾರ್ಯ ಪ್ರವೃತ್ತರಾಗಿ, ಡೆಂಘಿ ತಡೆಗಟ್ಟಿ; ಆರೋಗ್ಯಕರ ಜೀವನಕ್ಕಾಗಿ ಸುತ್ತಮುತ್ತಲೂ ಸ್ವಚ್ಛತೆ ಕಾಪಾಡಿ' ಎಂಬ ಧ್ಯೇಯದೊಂದಿಗೆ, ರಾಷ್ಟ್ರೀಯ ಡೆಂಘಿ ದಿನಾಚರಣೆ, ರಾಜ್ಯಾದ್ಯಂತ ಆಚರಿಸಿದ ವರದಿಗಳು ಬಂದಿವೆ.

<><><>

ಡೆಂಘಿ ಜ್ವರ ಸೇರಿದಂತೆ, ಸಾಂಕ್ರಾಮಿಕ ರೋಗಗಳನ್ನು ಸಮರ್ಪಕವಾಗಿ ನಿಯಂತ್ರಿಸಲು, ಅಗತ್ಯ ಮುಂಜಾಗೃತಾ ಕ್ರಮ ಕೈಗೊಳ್ಳಲು, ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ಸ್ಪ ್ಟ ಸೂಚನೆ ನೀಡಲಾಗಿದೆ ಎಂದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವ, ದಿನೇಶ ಗುಂಡೂರಾವ ತಿಳಿಸಿದ್ದಾರೆ. ಮಂಗಳೂರಿನಲ್ಲಿ, ರಾಷ್ಟ್ರೀಯ ಡೆಂಘಿ ಜಾಗ್ರತಿ ದಿನಾಚರಣೆ ಅಂಗವಾಗಿ, ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಅವರು ಮಾತನಾಡಿದರು. ಸಾರ್ವಜನಿಕರು ಸಹಕಾರ ನೀಡಿದಲ್ಲಿ, ಸ್ವಚ್ಛ ಜಲಜನ್ಯ ಕಾಯಿಲೆ ಡೆಂಘಿ ಸೇರಿದಂತೆ, ವಿವಿಧ ಸಾಂಕ್ರಾಮಿಕ ರೋಗಗಳಿಗೆ, ಸರ್ಕಾರ ಮತ್ತು ಇಲಾಖೆಗಳು ಕಡಿವಾಣ ಹಾಕಲು ಸಾಧ್ಯ. ಪ್ರತಿಯೊಬ್ಬರೂ, ತಮ್ಮ ಮನೆ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳಲು, ಆದ್ಯತೆ ನೀಡಬೇಕು ಎಂದರು.

<><><>

ರಾಜ್ಯಾದ್ಯಂತ ಪರಿಶಿ ್ಟ ಜಾತಿಗಳ ಸಮಗ್ರ ಗಣತಿ ಕಾರ್ಯ, ಮೊದಲ ಹಂತದಲ್ಲಿ, ಕಳೆದ 15ನೇ ತಾರೀಖಿನ ವರೆಗೆ, 18 ಲಕ್ಷದ 96 ಸಾವಿರ ಮನೆಗಳನ್ನು ಸಮೀಕ್ಷಿಸಿ, ಶೇಕಡ 73 ದಶಾಂಶ 72ರ ್ಟ ಗುರಿ ಸಾಧಿಸಲಾಗಿದೆ ಎಂದು, ಪರಿಶಿ ್ಟ ಜಾತಿ ಒಳ ಮೀಸಲಾತಿಯ, ಏಕಸದಸ್ಯ ಆಯೋಗದ ಅಧ್ಯಕ್ಷ, ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ್ ದಾಸ್, ಬೆಂಗಳೂರಿನಲ್ಲಿ ತಿಳಿಸಿದ್ದಾರೆ. 101 ಪರಿಶಿಷ್ಟ ಜಾತಿಗಳ ವೈಜ್ಞಾನಿಕ ವರ್ಗೀಕರಣಕ್ಕೆ, ಇಂದಿಗೆ ಕೊನೆಗೊಳ್ಳಲಿದ್ದ ಸಮೀಕ್ಷೆಯನ್ನು, ಈ ತಿಂಗಳ 25ರ ವರೆಗೆ ವಿಸ್ತರಿಸಲಾಗಿದೆ; ಮನೆಗೆ ಭೇಟಿ ನೀಡುವ ಸಮೀಕ್ಷಕರಿಗೆ, ಅಗತ್ಯ ದಾಖಲೆ ನೀಡಿ, ಸಹಕರಿಸುವಂತೆ ಅವರು ಕೋರಿದರು.

<><><>

ಪರ್ವತಾರೋಹಿ, ಸಮೀರಾ ಖಾನ್ ಅವರು ಕೈಗೊಂಡಿರುವ, ಮಿಷನ್ ಮೌಂಟ್ ಎವರೆಸ್ಟ್ ಸೈಕ್ಲಿಂಗ್‌ಗೆ, ಹುಬ್ಬಳ್ಳಿ ಬೈಸಿಕಲ್ ಕ್ಲಬ್ ಆಸರೆಯಾಗಿದೆ. 20ಕ್ಕೂ ಹೆಚ್ಚು ಕ್ಲಬ್ ಸದಸ್ಯರು, ಹುಬ್ಬಳ್ಳಿಯ ತೋಳಕೆರೆಯಿಂದ, ನಗರದಾದ್ಯಂತ, ಸಮೀರಾ ಖಾನ್ ಅವರೊಂದಿಗೆ, ಸೈಕ್ಲಿಂಗ್‌ನಲ್ಲಿ ಪಾಲ್ಗೊಂಡರು. 'ಮಹಿಳಾ ಸಬಲೀಕರಣ' ಹಾಗೂ 'ಕ್ರಿಯಾಶೀಲ

ಜೀವನಶೈಲಿ' ಧ್ಯೇಯದೊಂದಿಗೆ, ಸೈಕ್ಲಿಂಗ್ ಮಹತ್ವದ ಬಗ್ಗೆ, ಜನ ಜಾಗ್ರತಿ ಮೂಡಿಸಿದರು. ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ, ಹುಬ್ಬಳ್ಳಿ ಬೈಸಿಕಲ್ ಕ್ಲಬ್ ಅಧ್ಯಕ್ಷ ಶೆಟ್ಟೆಪ್ಪ ಫಿರಂಗಿ.

<><><>

ಶೆಟ್ಟೆಪ್ಪ ಫಿರಂಗಿ ಧ್ವನಿ 35 ಸೆಕೆಂದುಗಳು

<><><>

58ನೇ ಜ್ಞಾನಪೀಠ ಪ್ರಶಸ್ತಿಯನ್ನು, ಚಿತ್ರಕೂಟದ ತುಳಸಿ ಪೀಠದ ಸಂಸ್ಥಾಪಕ ಹಾಗೂ ಮುಖ್ಯಸ್ಥ ಜಗದ್ಗುರು ರಾಮಭದ್ರಾಚಾರ್ಯ ಅವರಿಗೆ, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, ಹೊಸ ದಿಲ್ಲಿಯಲ್ಲಿ ಪ್ರದಾನಿಸಿ, ಗೌರವಿಸಿದರು. ಇದೇ ಸಂದರ್ಭದಲ್ಲಿ ಕವಿ ಗುಲ್ಜಾರ್ ಅವರಿಗೂ, ಅವರ ಅನುಪಸ್ಥಿತಿಯಲ್ಲಿ ಜ್ಞಾನಪೀಠ ಪ್ರಶಸ್ತಿ, ಪ್ರದಾನ ಮಾಡಲಾಯಿತು.

<><><>

ಹುಬ್ಬಳ್ಳಿಯ ನವನಗರದ, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, 11ನೇ ಕನ್ನಡ ಕಲ್ಪಿತ ನ್ಯಾಯಾಲಯ ಸ್ಪರ್ಧೆಯನ್ನು, ಇಂದು ಮತ್ತು ನಾಳೆ, ವಿಶ್ವವಿದ್ಯಾಲಯದ, ಕಾನೂನು ಶಾಲೆ ಸಭಾಂಗಣದಲ್ಲಿ, ಆಯೋಜಿಸಿದೆ. ಇಂದು ಬೆಳಗ್ಗೆ 10 ಗಂಟೆಗೆ, ರಾಜ್ಯ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಟಿ. ವೆಂಕಟೇಶ ನಾಯ್ಕ ಉದ್ಘಾಟಿಸಲಿದ್ದಾರೆ.

<><><>

ನಾಳೆ ಸಂಜೆ 4 ಗಂಟೆಗೆ, ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ಜರುಗುವ, ಸಮಾರೋಪ ಸಮಾರಂಭದಲ್ಲಿ, ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ರವಿ ಹೊಸಮನಿ, ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು, ಉಪ ಕುಲಪತಿ ಸಿ. ಬಸವರಾಜು, ತಿಳಿಸಿದ್ದಾರೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಕೋಲಾರ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ, ಮಾಹಿತಿ ಹಕ್ಕು ಅಧಿನಿಯಮದ ಬಗ್ಗೆ, ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ ತರಬೇತಿ ಕಾರ್ಯಾಗಾರ ನಡೆಯಲಿದೆ.

<><><>

ರಾಮನಗರ ಜಿಲ್ಲೆ, ಬಿಡದಿ ಹೋಬಳಿ, ಭದ್ರಾಪುರ ಗ್ರಾಮದ, ಖುಷಿ ಎಂಬ, ಹಕ್ಕಿಪಿಕ್ಕಿ ಸಮುದಾಯದ ಬಾಲಕಿ, ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟ ಹಿನ್ನೆಲೆ, ಸಂಸದ ಸಿ.ಎನ್. ಮುಂಜುನಾಥ, ಭೇಟಿ ನೀಡಿ, ಕುಟುಂಬಕ್ಕೆ ಸಾಂತ್ವನ ಹೇಳಿದರು.

<><><>

ಧಾರವಾಡ ಎಸ್.ಡಿ.ಎಮ್. ಇಂಜಿನಿಯರಿಂಗ್ ಕಾಲೇಜ್ ಆಯೋಜಿಸಿರುವ, ರಾಷ್ಟ್ರೀಯ ಟೆಕ್ನೋ-ಕಲ್ಚರಲ್ ಫೆಸ್ಟಿವಲ್, ಇನ್ಸಿಗ್ನಿಯಾಕ್ಕೆ, ಜೀವಂಧರ ಕುಮಾರ್ ಚಾಲನೆ ನೀಡಿದರು.

<><><>

ರಾಜ್ಯ ಸರ್ಕಾರಿ ನೌಕರರ, ರಾಜ್ಯ ಮಟ್ಟದ ಕ್ರೀಡಾಕೂಟ, ನಾಳೆ ಮತ್ತು ನಾಡಿದ್ದು, ಶಿವಮೊಗ್ಗದ ನೆಹರೂ ಕ್ರೀಡಾಂಗಣದಲ್ಲಿ ನಡೆಯಲಿದೆ. ಮುಖ್ಯಮಂತ್ರಿ ಕ್ರೀಡಾಕೂಟವನ್ನು ಉದ್ಘಾಟಿಸಲಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ‘ಆಪರೇ ’ನ್ ಸಿಂಧೂರ್’; ರಾಜ್ಯದ ವಿವಿಧೆಡೆ, ಭಾರತೀಯ ಸೈನ್ಯವನ್ನು ಅಭಿನಂದಿಸಿ, ‘ತಿರಂಗಾ ಯಾತ್ರೆ’,
- ಕೊಪ್ಪಳದ ನವಲಿಯಲ್ಲಿ, ತುಂಗಭದ್ರಾ ಸಮಾನಾಂತರ ಜಲಾಶಯ; ಆಂಧ್ರ ಹಾಗೂ ತೆಲಂಗಾಣಕ್ಕೆ, ರಾಜ್ಯದ ಪ್ರಸ್ತಾವ.
- ರಾಷ್ಟ್ರೀಯ ಡೆಂಘಿ ದಿನ; ನೈರ್ಮಲ್ಯ ಕಾಪಾಡಲು, ಜನಜಾಗ್ರತಿ.
- ಪರಿಶಿಷ್ಟ ಜಾತಿ ಒಳ ಮೀಸಲಾತಿ ಸಮೀಕ್ಷೆ; ಈ ತಿಂಗಳ 25ರ ವರೆಗೆ, ವಿಸ್ತರಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>